# ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಸ್ಥಾನಮಾನ

**ವನಜಾಕ್ಷಿ ಆರ್ ಹಳ್ಳಿಯವರ[1] & ಪ್ರವೀಣ್ ಕುಮಾರ್ ಜೆ.[2]**

[1]ಪ್ರಾಂಶುಪಾಲರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಜಾಜಿನಗರ, ಬೆಂಗಳೂರು.

[2]ಎಂ.ಕಾಂ. ವಿದ್ಯಾರ್ಥಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ.

**Received: 28-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284039**

**ABSTRACT:**

ಕನ್ನಡ ಸಾಹಿತ್ಯಕ್ಕೆ ಮಹಿಳಾ ಸಾಹಿತಿಗಳ ಕೊಡುಗೆ ಅನನ್ಯವಾದುದು. ಚರಿತ್ರೆಯ ಎಲ್ಲಾ ಕಾಲಘಟ್ಟಗಳಲ್ಲೂ ಸಾಹಿತ್ಯದ ಮೂಲಕ ವರ್ತಮಾನದ ತಲ್ಲಣಗಳನ್ನು ವಿಶೇಷವಾಗಿ ಮಹಿಳೆಯ ದುಃಖ ದುಮ್ಮಾನಗಳಿಗೆ ಒತ್ತು ಕೊಟ್ಟು ನೋವುಗಳನ್ನು ಮಹಿಳಾ ಸಾಹಿತಿಗಳು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಉದಾಹರಣೆಗಳ ಮೂಲಕ ಇಲ್ಲಿ ಚರ್ಚಿಸಲಾಗಿದೆ. ವಚನ ಸಾಹಿತ್ಯದಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯದ ಉಪಲಬ್ಧವಿರುವ ಮಹಿಳಾ ಸಾಹಿತಿಗಳನ್ನು ಗುರುತಿಸಿ ಪ್ರಾತಿನಿಧಿಕವಾಗಿ ಒಂದು ವಚನವನ್ನು ಮತ್ತು ಆಯ್ದ ಸಾಲುಗಳನ್ನು ಈ ಲೇಖನದಲ್ಲಿ ವಿಮರ್ಶಿಸಲಾಗಿದೆ. ಆ ಮೂಲಕ ಕನ್ನಡ ಸಾಹಿತ್ಯದಿಂದ ಮಹಿಳೆ ಸ್ಥಾನಮಾನವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಮಹಿಳೆ ಸಾಹಿತ್ಯಿಕವಾಗಿ ಎದುರಿಸುತ್ತಿರುವ ಸವಾಲನ್ನು ಕೂಡ ತುಣುಕಾಗಿ ಅರ್ಥೈಸಲಾಗಿದೆ. ಸಾಹಿತ್ಯಿಕ ಸನ್ನಿವೇಶಗಳ ವಾಸ್ತವಕ್ಕಿಂತ ಹೇಗೆ ಭಿನ್ನವಾಗಿದೆ ಮತ್ತು ಭಿನ್ನವಾಗಿಲ್ಲ ಎಂಬುದನ್ನು ನಮೂದಿಸಲಾಗಿದೆ. ಒಟ್ಟಾರೆಯಾಗಿ, ಮಹಿಳಾ ಸಾಹಿತ್ಯ ಬೆಳೆದು ಬಂದ ದಾರಿ, ಸ್ತ್ರೀವಾದ ಮತ್ತು ಮಹಿಳಾ ಸಬಲೀಕರಣದಲ್ಲಿ ಸಾಹಿತ್ಯ ಪ್ರಮುಖ ಪಾತ್ರವನ್ನು ವಹಿಸಿದೆ ಎಂಬುದನ್ನು ಗುರುತಿಸಲಾಗಿದೆ.

**KEYWORDS:**

ಸ್ತ್ರೀವಾದ, ಮಹಿಳಾ ಸಾಹಿತ್ಯ, ಸ್ವಾತಂತ್ರ್ಯ, ಕನ್ನಡ ಸಾಹಿತ್ಯ, ಮಹಿಳೆ.

ಸಾವಿರಾರು ವರುಷಗಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ, ಮಹಿಳೆ ಬರೆದದ್ದು ಕಿರ ಬೆರಳೆಣಿಕೆಯಷ್ಟು ಮಾತ್ರ. ಆದರೆ ಮಹಿಳೆಯ ರೂಪದಿಂದ ಮೊದಲ್ಗೊಂಡು ಆಕೆಯ ಬದುಕಿನ ಎಲ್ಲ ಆಯಾಮಗಳೂ ಸಾಹಿತ್ಯ ರಚನೆಗೆ ವಸ್ತುವಾದದ್ದೇ ಹೆಚ್ಚು. ಅದಕ್ಕೆ ಪುರುಷ ಪ್ರಧಾನ ಸಮಾಜ ವರ್ಣವ್ಯವಸ್ಥೆಯ ನಿಯಮಗಳು ಮಾನವ ಸಮಾಜದಲ್ಲಿ ಹೆಚ್ಚು ಪ್ರಾಧಾನ್ಯತೆ ಪಡೆದದ್ದು ಬಹು ಮುಖ್ಯವಾದ ಕಾರಣವಾದರೆ, ಮತ್ತೊಂದೆಡೆ ಸ್ವಾತಂತ್ರ್ಯವಿರದೆ ಪರಾವಲಂಬನೆಯಲ್ಲಿಯೇ ಬದುಕು ಕಟ್ಟಿಕೊಳ್ಳಬೇಕಾಗಿದ್ದ ಮಹಿಳೆ ಬಹುಕಾಲದ ವರೆಗೆ ಕನ್ನಡ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಅನನ್ಯತೆಯನ್ನು ಕಂಡುಕೊಳ್ಳಲು ಕಷ್ಟ ಸಾಧ್ಯವಾಯಿತೆಂದೇ ಹೇಳಬೇಕಾಗುತ್ತದೆ. ಕನ್ನಡ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ಮಹಿಳೆಯರಿಂದ ಸಾಹಿತ್ಯ ರಚನೆಯಾದುದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದಗಳೆಂಬಂತೆ ಆಕರಗಳು ದೊರೆಯುತ್ತವಾದರೂ ಹತ್ತೊಂಬತ್ತು-

ಇಪ್ಪತ್ತನೆಯ ಶತಮಾನದಲ್ಲಿಯೇ ನಮಗೆ ಮಹಿಳಾ ಸಾಹಿತ್ಯ ಸೃಜನಶೀಲತೆಯ ವಾಹಿನಿಯಾಗಿ ಮೂಡಿಬಂದದ್ದು.

'ಕನ್ನಡ ಸಾಹಿತ್ಯದಲ್ಲಿ ಮಹಿಳೆ' ಎಂದರೆ ಮಹಿಳೆಯರನ್ನು ಕುರಿತು ರಚನೆಯಾದ ಸಾಹಿತ್ಯವೆಂತಲೂ, ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು ರಚಿಸಿದ ಸಾಹಿತ್ಯವೆಂತಲೂ ಅರ್ಥೈಸಬಹುದು. ಈ ಲೇಖನದಲ್ಲಿ ಇಷ್ಟೊಂದು ವಿಸ್ತಾರವಾದ ವಿಷಯವನ್ನು ಕುರಿತು ಸಂಪೂರ್ಣವಾಗಿ ವಿವರಿಸುವುದು ಕಷ್ಟದ ಮಾತೇ ಸರಿ. ಹತ್ತಾರು ಸಂಶೋಧನಾ ಪ್ರಬಂಧಗಳಿಗೆ ಆಕರವಾಗುವಷ್ಟು ಹರವು ಪಡೆದುಕೊಂಡಿರುವ ಪ್ರಸ್ತುತ ವಿಷಯದಲ್ಲಿ ಮಹಿಳೆಯ ಸ್ಥಾನಮಾನಗಳು ಕನ್ನಡ ಸಾಹಿತ್ಯದಲ್ಲಿ ಹರಳುಗಟ್ಟಿದ್ದನ್ನಷ್ಟೇ ಕೇಂದ್ರೀಕರಿಸಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ವೇದ ಕಾಲದಿಂದಲೂ ಮಹಿಳೆ ಪೂಜನೀಯಳಾಗಿ, ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ತನ್ನ ಬದುಕನ್ನು ಕಟ್ಟಿಕೊಳ್ಳಬೇಕಾಗಿತ್ತು. 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದ ಮನು:

**'ಯತ್ರ ನಾರ್ಯಸ್ತು ಪೂಜ್ಯಂತೇ**
**ರಮಂತೇ ತತ್ರ ದೇವತಾಃ'**

(ಎಲ್ಲಿ ಮಹಿಳೆಯರನ್ನು ಗೌರವದಿಂದ, ಪೂಜನೀಯ ಭಾವದಿಂದ ಕಾಣಲಾಗುತ್ತಿದೆಯೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ) ಎಂದು ಮಹಿಳೆಯ ಬಗ್ಗೆ ವ್ಯಾಖ್ಯಾನಿಸಿ ಅವಳನ್ನು ದೇವ ಸಮನಾಗಿ ಕಾಣುತ್ತಾನೆ. ಮತ್ತೊಂದೆಡೆ ಹೆಣ್ಣು ಜೀವ ಸಂಕುಲದ ಸೃಷ್ಟಿಕರ್ತಳು, ಅವಳು ಪುರುಷನಿಗೆ ಬೆನ್ನೆಲುಬಾಗಿ ನಿಂತವಳು. ಸಕಲ ಕಾರ್ಯಗಳಲ್ಲೂ ಅವಳದು ಜವಾಬ್ದಾರಿತನದ ಪಾತ್ರವೆಂದು ಗುರುತಿಸಿದ ನಮ್ಮ ಪೂರ್ವಜರು:

**'ಕಾರ್ಯೇಷು ದಾಸಿ ಸಲಹೇಷು ಮಂತ್ರಿ**
**ಭೋಜೇಷು ಮಾತ, ಶಯನೇಷು ರಂಭಾ**
**ರೂಪೇಷು ಲಕ್ಷ್ಮಿ ನಾರಿ ಕ್ಷಮಯಾಧರಿತ್ರಿ.'**

(ಕಾರ್ಯದಲ್ಲಿ ದಾಸಿ, ಸಲಹೆ ನೀಡುವ ಮಂತ್ರಿ, ಊಟದಲ್ಲಿ ಮಾತೆ, ಆನಂದದಲ್ಲಿ ರಂಭೆ, ರೂಪದಲ್ಲಿ ಲಕ್ಷ್ಮಿ, ಕ್ಷಮೆಯಲ್ಲಿ ಭೂಮಿ) ಎಂದು ಅವಳ ಗುಣಗಾನ ಮಾಡಿದ್ದಾರೆ. ಜಾನಪದ ಸಾಹಿತ್ಯವನ್ನು ಅವಲೋಕಿಸಿದಾಗ ಕನ್ನಡ ಸಾಹಿತ್ಯ ಕೃಷಿಯಲ್ಲಿ ಈ ಜಾನಪದ ಸಾಹಿತ್ಯವೇ ಮಿಕ್ಕೆಲ್ಲ ಸಾಹಿತ್ಯಕ್ಕೆ ತಾಯಿ ಬೇರು. ಮೌಖಿಕ ಪರಂಪರೆಯ ಮೂಲಕ ವ್ಯಕ್ತಿ ಬದುಕಿನ ಎಲ್ಲ ಆಯಾಮಗಳೂ ಬಹುತೇಕವಾಗಿ ತ್ರಿಪದಿ ಛಂದಸ್ಸಿನಲ್ಲಿ ಮೂಡಿ ಬಂದ ಜಾನಪದ ಸಾಹಿತ್ಯದ ಕರ್ತೃ ನಿಗೂಢವಾಗಿದ್ದರೂ ಆ ಸಾಹಿತ್ಯ ರಚನೆಯಲ್ಲಿ ಬಹುಪಾಲು ಮಹಿಳೆಯರದ್ದೇ ಆಗಿರುವುದು ವಿಶೇಷ. ಇಲ್ಲಿ ಮಹಿಳೆ ತನ್ನ ದೈನಂದಿನ ಬದುಕಿನ ಎಲ್ಲ ಸ್ಥರಗಳನ್ನು ಹಾಡಾಗಿ ಹೆಣೆದಿದ್ದಾಳೆ. ಜಾನಪದ ಮಹಿಳೆ ಪುರುಷ ಸಮಾಜವನ್ನು ವಿರೋಧಿಸಿ ಬದುಕಿದ್ದು ತೀರ ವಿರಳ. ಅವನು ಎಷ್ಟೇ ಕಟುವಾಗಿ ವರ್ತಿಸಿದರೂ ಸಮರ್ಥಿಸಿಕೊಂಡೇ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಿದಳು. ಪರಸತಿಯ ಸಂಗಮಾಡಿದ

ಗಂಡನಾದಿಯಾಗಿ ಎಲ್ಲ ಸಂಬಂಧಗಳ ಪುರುಷರನ್ನು ಕ್ಷಮಿಸುತ್ತಲೇ ಸುಖ ಸಂಸಾರದ ಕನಸು ಕಂಡವಳು. 'ಅಂಗೀಯ ಮ್ಯಾಲಂಗಿ ಚಂದೇನು ನನರಾಯ' ಎನ್ನುತ್ತಲೇ ನಯವಾಗಿ ಪ್ರತಿಭಟಿಸುವಳು. ಸಹೋದರರಿಂದ ಯಾವುದೇ ಪ್ರತಿಫಲಾಪೇಕ್ಷೆ ಬಯಸದ ತವರು ಮನೆಯ ಹೆಣ್ಣು ಮಗಳು 'ಗರಕೀಯ ಕುಡಿಹಾಂಗ ಹಬ್ಬಲಿ ಅವರ ರಸಬಳ್ಳಿ' ಎನ್ನುತ್ತಾಳೆ. ಹೆಣ್ಣೀನ ಜನುಮಕೆ ಅಣ್ಣತಮ್ಮರು ಬೇಕು, 'ಬೆನ್ನು ಕಟ್ಟುವರು ಸಭೆಯೊಳಗೆ' ಎಂದು ಸಂಬಂಧದ ಆಸರೆಯನ್ನು ಬಯಸುತ್ತಾಳೆ. ಪುರುಷ ಸಮಾಜದ ಯಜಮಾನಿಕೆಯನ್ನು ಒಪ್ಪಿಕೊಳ್ಳುತ್ತಲೇ ಜಾನಪದ ಮಹಿಳೆ ಪ್ರತಿಭಟನೆಗಿಂತ ಮೌನವಾಗಿ ಬದುಕು ನಿರ್ವಹಿಸಿದ್ದೇ ಹೆಚ್ಚು.

ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಶಾತವಾಹನರ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ, ರಾಜಕೀಯದಂತಹ ಮೊದಲಾದ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಪ್ರದರ್ಶಿಸಿದ ಕೆಲ ಮಹಿಳೆಯರು ಪ್ರತಿಭೆಗೆ ಉದಾಹರಣೆಯಾಗಿ ಸಿಗುತ್ತಾರೆ. ಕ್ರಿ.ಶ. ಸುಮಾರು 610-642 ರ ವರೆಗೆ ರಾಜ್ಯವಾಳಿದ ಬಾದಾಮಿ ಚಾಲುಕ್ಯರ ಪ್ರಸಿದ್ಧ ದೊರೆ ಇಮ್ಮಡಿ ಪುಲಕೇಶಿಯ ಎರಡನೆಯ ಮಗನಾದ ಚಂದ್ರಾದಿತ್ಯನ ಪಟ್ಟದ ರಾಣಿ ವಿಜಯ ಮಹಾದೇವಿ, ಶ್ರೇಷ್ಠ ಸಂಸ್ಕೃತ ಪಾಂಡಿತ್ಯದೊಂದಿಗೆ ಉತ್ತಮ ಕವಯತ್ರಿಯೂ ಆಗಿದ್ದು 'ಕೌಮುದೀ ಮಹೋತ್ಸವ'ವೆಂಬ ಸಂಸ್ಕೃತ ನಾಟಕ ರಚನೆ ಮಾಡಿದ್ದಳೆಂದು ತಿಳಿದು ಬರುತ್ತದೆ.

ಕವಿಚಕ್ರವರ್ತಿ ರನ್ನನ ಸಮಕಾಲೀನಳಾಗಿದ್ದ ಅತ್ತಿಮಬ್ಬೆಯು (ಕಿ.ಶ. 10ನೆಯ ಶತಮಾನ) ಸಾವಿರದೈನೂರು ಜೈನ ಬಸದಿಗಳನ್ನು ಕಟ್ಟಿಸುವುದರೊಂದಿಗೆ, ಅಲ್ಲಿ ಜಿನ ಪ್ರತಿಮೆಗಳನ್ನು ನಿರ್ಮಿಸಿ ಧರ್ಮ ಪ್ರಚಾರದಲ್ಲಿ ತೊಡಗಿದ್ದಳು. ಕವಿ ರನ್ನನಿಂದ 'ಅಜಿತ ತೀರ್ಥಂಕರ ಪುರಾಣ ತಿಲಕ'ವೆಂಬ ಕೃತಿ ರಚಿಸಲು ಪ್ರೇರಣೆ ನೀಡಿ, ಪೊನ್ನ ಕವಿ ವಿರಚಿತ 'ಶಾಂತಿ ಪುರಾಣ'ದ ಸಾವಿರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದ್ದಳು. ಅವಳ ಮುಖ್ಯ ಉದ್ದೇಶ ಧರ್ಮಪ್ರಸಾರದ ಕಾರ್ಯವಾಗಿದ್ದರೂ ಆ ಮೂಲಕ ಸಾಹಿತ್ಯ ರಚನೆಗೆ ಪ್ರೇರಕಳಾಗಿ ಕಾರ್ಯನಿರ್ವಹಿಸಿ ಇತಿಹಾಸದಲ್ಲಿ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂದು ಪ್ರಸಿದ್ಧಳಾದಳು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಸುವರ್ಣಯುಗ'ವೆಂದು ಬಣ್ಣಿಸಲಾಗುವ 'ವಚನಯುಗ'ದಲ್ಲಿ ಧಾರ್ಮಿಕ ತಳಹದಿಯ ಮೇಲೆ ಅನೇಕ ಮಹಿಳೆಯರು ವಚನಗಳನ್ನು ರಚಿಸಿ, ಸಾಹಿತ್ಯ ವಾಹಿನಿಯ ಕೃಷಿ ಹೆಚ್ಚಿಸುವಲ್ಲಿ ಸಾಕ್ಷಿಯಾದರು. ಬಸವಣ್ಣನವರ ನೇತೃತ್ವದಲ್ಲಿನ 'ಅನುಭವ ಮಂಟಪ' ಜಾತಿ-ಮತ-ಲಿಂಗ ತರತಮತೆಗಳನ್ನು ಮೆಟ್ಟಿನಿಂತು, ಪ್ರತಿಯಬ್ಬರೂ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದಕ್ಕೆ, ವಾಕ್ ಸ್ವಾತಂತ್ರ್ಯಕ್ಕೆ ವೇದಿಕೆಯಾಗಿತ್ತು. ಮಹಿಳಾ ವಚನಕಾರರಲ್ಲಿ ಮುಖ್ಯವಾಗಿ ಅಕ್ಕಮಹಾದೇವಿ ಶೈವಧರ್ಮವನ್ನು ಅಪ್ಪಿಕೊಂಡಿದ್ದರೂ ಕ್ರಾಂತಿಕಾರಿ ವೈಚಾರಿಕತೆಯ ಚಿಂತಕಿಯಾಗಿ ರಚಿಸಿದ ಅವಳ ಬಹುತೇಕ ವಚನಗಳು ಈಗಲೂ ಪ್ರಸ್ತುತವೆನಿಸುತ್ತವೆ. ಮಹಾದೇವಿಯು ಸಮಾಜದ ಅನಿಷ್ಟ ಪದ್ಧತಿ, ಪುರುಷ ಪ್ರಾಧಾನ್ಯ ಸಮಾಜದ ದಬ್ಬಾಳಿಕೆಗಳನ್ನು ಪ್ರತಿಭಟಿಸುತ್ತಲೇ ಆತ್ಮ

ವಿಮರ್ಶಕಿಯಾಗಿ ವಚನಯುಗದ ಬಹುತೇಕ ವಚನಕಾರರಿಗೆ ಮಾದರಿಯಾದಳು. ಅದೇ ಕಾಲಘಟ್ಟದ ಗಂಗಾಂಬಿಕೆ, ನೀಲಾಂಬಿಕೆಯರು ಹಾಗೂ ಕದಿರೆ ರಮ್ಮವ್ವೆ, ಕುಂಬಾರ ಕೇತಲದೇವಿ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ, ಲಕ್ಷ್ಮಮ್ಮ, ಕಾಳವ್ವ, ಗುಡ್ಡವ್ವೆ-ಇವರೇ ಮೊದಲಾದ ಕೆಳವರ್ಗದ ಮಹಿಳೆಯರು ವಚನಗಳ ರಚನೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ.

ಮಹಿಳೆಯರೊಂದಿಗೆ ಕೆಳವರ್ಗದ ಪುರುಷ ವಚನಕಾರರು ಕೂಡ ತಮ್ಮ ವಚನಗಳಲ್ಲಿ ಸಮಾಜದ ರೀತಿ-ನೀತಿಗಳನ್ನು, ಜಾತಿ ಮತ್ತು ಲಿಂಗತರತಮತೆಯ ಭೇದಗಳನ್ನು ತೊಡೆದು ಹಾಕುವ ಚಿಂತನೆ ಮಾಡಿದರು. ಹನ್ನೆರಡನೆಯ ಶತಮಾನದ ವಚನಕಾರ್ತಿಯರು, ಇಪ್ಪತ್ತನೆಯ ಶತಮಾನದ ದಲಿತ-ಬಂಡಾಯವಾದಕ್ಕೆ, ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆ ಬೇಕೆಂಬ ಆಲೋಚನೆ ಮತ್ತು ಬೇಡಿಕೆಗಳಿಗೆ ಅಂದೇ ಮುನ್ನುಡಿ ಬರೆದರು. ಅದರಲ್ಲೂ ಅಕ್ಕಮಹಾದೇವಿಯನ್ನು ಕನ್ನಡ ಸಾಹಿತ್ಯದ ಮೊದಲ ಬಂಡಾಯ ಲೇಖಕಿ ಎಂತಲೂ ವಿಮರ್ಶಕರು ಗುರುತಿಸಿದ್ದಾರೆ.

ವಿಜಯನಗರದ ಅರಸರ ಕಾಲದಲ್ಲಿ ಕಂಪಣನ ರಾಣಿಯಾದ ಗಂಗಾಂಬಿಕೆ ಮಧುರಾ ವಿಜಯ, ವರದಾಂಬಿಕಾ ಪರಿಣಯ ಎಂಬ ಕೃತಿಗಳನ್ನು ರಚಿಸಿದಳು. ಅಭಿರಾಮ ಕಾಮಾಕ್ಷಿ ಎಂಬಾಕೆ 'ಅಭಿನವ ರಾಮಾಭ್ಯುದಯ'ವನ್ನೂ ರಚಿಸಿದರು. ರಘುನಾತ ನಾಯಕನ ಆಸ್ಥಾನದಲ್ಲಿ ಮಧುರವಾಣಿ ಎಂಬ ಕವಯತ್ರಿ ಇರುವುದು ತಿಳಿದುಬರುತ್ತದೆ. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಚಿ ಹೊನ್ನಮ್ಮ ರಚಿಸಿರುವ 'ಹದಿಬದೆಯ ಧರ್ಮ' ಕನ್ನಡ ಸಾಹಿತ್ಯದಲ್ಲಿಯೇ ಒಂದು ಅನನ್ಯ ಪತಿವ್ರತಾಧರ್ಮ ಗ್ರಂಥ. ಸಾಂಗತ್ಯದಲ್ಲಿ ಈ ಕೃತಿ ರಚನೆಯಾಗಿದ್ದು ಇದರಲ್ಲಿ 'ಸನಾತನ ಪದ್ಧತಿ' ಎದ್ದು ಕಾಣುತ್ತದೆ. ಹೊನ್ನಮ್ಮನ ದೃಷ್ಟಿಯಲ್ಲಿ ಹೆಣ್ಣು ಗೃಹದೇವತೆ. ಪತಿವ್ರತಾ ಧರ್ಮವನ್ನು ಸರಳ-ಸುಂದರವಾಗಿ ಕಟ್ಟಿಕೊಟ್ಟಿದ್ದಾಳೆ. ಸಮಾಜದಲ್ಲಿನ ಪುರುಷ ಪ್ರಾಧಾನ್ಯತೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಪುರುಷನ ಸುಖ ಸಂತೋಷಗಳಿಗಾಗಿ ಮಹಿಳೆ ದುಡಿದರೆ ಮಾತ್ರವೇ ಕುಟುಂಬ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಸುಖ ನೆಮ್ಮದಿಗಳು ಮನೆ ಮಾಡುತ್ತವೆ ಎಂಬ ಅಭಿಪ್ರಾಯವನ್ನೇ ಕೃತಿಯುದ್ದಕ್ಕೂ ನಿರೂಪಿಸಿದರೂ ಅಲ್ಲಲ್ಲಿ ಹೆಣ್ಣು ಮಕ್ಕಳ ಸಮಾನತೆಗಾಗಿ ದನಿ ಎತ್ತಿದ್ದಾಳೆ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನದ ಮಹತ್ವವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾಳೆ.

**"ಕುವರನಾದರೆ ಬಂದ ಗುಣವೇನದರಿಂದ**
**ಕುವರಿಯಾದಡೆ ಕುಂದೇನು"[1]**

ಎಂದು ಪ್ರಶ್ನಿಸುತ್ತಲೇ ಮಹಿಳೆಯ ಮಹತ್ವದ ಬಗ್ಗೆ:

**"ಪೆಣ್ಣಲ್ಲವೇ ನಮ್ಮನ್ನೆಲ್ಲ ಪಡೆದ ತಾಯಿ**
**ಪೆಣ್ಣಲ್ಲವೆ ಪೊರೆದವಳು**
**ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು**
**ಕಣ್ಣು ಕಾಣದ ಗಾವಿಲರು"[2]**

ಎನ್ನುವಲ್ಲಿ ಅವಳ ಅಗತ್ಯತೆ ಮತ್ತು ಅನಿವಾರ್ಯತೆಯನ್ನು ಸೂಚಿಸಿದ್ದಾಳೆ. ಆ ಮೂಲಕ ಹೊನ್ನಮ್ಮ ಹೆಣ್ಣು ಕೀಳಲ್ಲ ಪುರುಷ ಸಮಾನಳು ಎಂಬ ಚಿಂತನೆಯೊಂದಿಗೆ ಮಹಿಳಾಪರ ನಿಲುವನ್ನು ಪ್ರಕಟಿಸುತ್ತಾಳೆ. ಶೃಂಗಾರಮ್ಮ ಎಂಬ ಕವಯತ್ರಿ ಬರೆದ 'ಪದ್ಮಿನೀ ಕಲ್ಯಾಣ' ಸಾಂಗತ್ಯರೂಪದಲ್ಲಿ ರಚಿತವಾಗಿದ್ದು ಇದಕ್ಕೆ ಜೈಮಿನೀ ಭಾರತ ಮೂಲ ಆಕರವಾಗಿದೆ ಎಂದು ಲೇಖಕಿಯೇ ಹೇಳಿಕೊಳ್ಳುತ್ತಾಳೆ.

ಕನ್ನಡ ಸಾಹಿತ್ಯದಲ್ಲಿ ಆಶುಕವಿ ಎಂದೇ ಗುರುತಿಸಲಾಗಿರುವ ಸರ್ವಜ್ಞ ಮಹಿಳೆಯರ ಬಗ್ಗೆ ಅನೇಕ ತ್ರಿಪದಿಗಳನ್ನು ರಚಿಸಿದ್ದಾನೆ.

**"ಹೆಣ್ಣಿಂದಲೇ ಇಹವು ಹೆಣ್ಣಿಂದಲೇ ಪರವು**
**ಹೆಣ್ಣಿಂದಲೇ ಸಕಲ ಸಂಪದವು**
**ಹೆಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ"[3]**

ಎಂದು ಪ್ರಶ್ನಿಸುವ ಮೂಲಕ ಇಹ-ಪರಗಳಿಗೆ ಪುರುಷ ಸಮಾಜಕ್ಕೆ ಮಹಿಳೆಯಿಂದಲೇ ಸಕಲ ಸಂಪದವೆನ್ನುವನು. ಹಾಗೆಯೇ:

**"ಸತ್ಯಕ್ಕೆ ಸರಿಯಿಲ್ಲ ಮಿಥ್ಯಕ್ಕೆ ನೆಲೆಯಿಲ್ಲ**
**ಹೆತ್ತಮ್ಮನಿಗಿಂತ ಹಿತರಿಲ್ಲ ನರರೊಳಗೆ**
**ನಿತ್ಯರೇ ಇಲ್ಲ ಸರ್ವಜ್ಞ"[4]**

ಎಂಬ ತ್ರಿಪದಿಯಲ್ಲಿ ಹೊತ್ತು ಹೆತ್ತು-ಸಾಕಿ ಸಲಹುವ ಹೆತ್ತಮ್ಮನಿಗೆ ಸರಿಸಾಟಿಯಾಗಿ ನರರೊಳಗೆ ಮತ್ತಾರೂ ಸಮನಲ್ಲವೆಂದಿರುವುದು ಹೆಣ್ಣಿನ ಮಹತ್ವಕ್ಕೆ ಸಾಕ್ಷಿಯಾಗಿದೆ.

ದಾಸ ಸಾಹಿತ್ಯದ ಸಂದರ್ಭದಲ್ಲಿಯೂ ಬಹುತೇಕ ಮಹಿಳೆಯರು ಕೂಡ ಕೀರ್ತನೆಗಳನ್ನು ರಚಿಸಿರುವುದುಂಟು. ರುಕ್ಮಿಣಿಬಾಯಿ, ಗಲಗಲಿ ಅವ್ವ, ಹರಪನಹಳ್ಳಿ ಭೀಮವ್ವ ಮೊದಲಾದವರು ಪ್ರಮುಖರು. ಗೋಪಾಲಕೃಷ್ಣ ವಿಠಲ ಎಂಬ ಅಂಕಿತನಾಮದೊಂದಿಗೆ ಸುಮಾರು ನಾನೂರಕ್ಕೂ ಹೆಚ್ಚು ಹಾಡುಗಳನ್ನು, ದ್ವಿಪದಿ ಛಂದಸ್ಸಿನ ರಾಮಾಯಣವನ್ನೂ ಬರೆದ ಚಿತ್ರದುರ್ಗದ ಅಂಬಾಬಾಯಿ (ಕ್ರಿ.ಶ. 1902) ಜೀವನ ವಿವರಗಳು ಇತ್ತೀಚಿನ ಸಂಶೋಧನೆಯಲ್ಲಿ ದೊರಕಿದ್ದು, ಆಕೆಯ ಹಾಡಿನ ಕ್ಯಾಸೆಟ್‌ಗಳು ಕೂಡ ಬಿಡುಗಡೆಯಾಗಿವೆ.

ಆಧುನಿಕ ಕನ್ನಡದ ಪ್ರಮುಖ ಸಾಹಿತ್ಯ ಚಳುವಳಿಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯ ಕೃಷಿಕರು ಹೆಣ್ಣನ್ನು ಭಾವುಕಳನ್ನಾಗಿ ಚಿತ್ರಿಸಿದರು. ಹೆಣ್ಣು ಮುಖ್ಯವಾಗಿ ಭೋಗದ ವಸ್ತುವಾಗಿಯೇ ಕಂಡು ಬಂದಳು. ಇಂದಿರಾಬಾಯಿ, ವಾಗ್ದೇವಿ, ಕಾನೂರು ಹೆಗ್ಗಡಿತಿ, ಮೈ ಮನಗಳ ಸುಳಿಯಲಿ, ನಗ್ನಸತ್ಯ, ಶನಿಸಂತಾನ, ಒಡಲಾಳ, ಕುಸುಮಬಾಲೆ, ಉಯ್ಯಾಲೆ, ವೈಶಾಖ, ಕೊನೆಯ ಗಿರಾಕಿ, ಮಾರಿಕೊಂಡವರು, ಇವೇ ಮೊದಲಾದ ಕೃತಿ-ಕಥೆಗಳಲ್ಲಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ, ವಿಧವಾ ವಿವಾಹದಂತಹ ಹಲವಾರು ಸಮಸ್ಯೆಗಳೊಂದಿಗೆ, ಮಹಿಳಾಪರ ಕಾಳಜಿಯ ಚಿಂತನೆಗಳು ಹರಿದು ಬಂದಿವೆ. ಮಹಿಳೆಯರ ವ್ಯಭಿಚಾರ, ದಾಸ್ಯ, ಹಸಿವು ಮೊದಲಾದ

ಸಮಸ್ಯೆಗಳನ್ನೊಳಗೊಂಡಂತೆ ಶ್ರೀಮಂತಿಕೆಯ ಮದವಿದ್ದ ಪುರುಷರು ದುರ್ಬಲ ಮತ್ತು ಅಸಹಾಯಕ ಹೆಂಗಳೆಯರನ್ನು ಹೇಗೆ ಉಪಭೋಗದ ವಸ್ತುವಾಗಿ ಬಳಸಿಕೊಳ್ಳುತ್ತಿದ್ದರೆಂಬುದನ್ನು ಸಾಹಿತ್ಯದಲ್ಲಿ ಹಿಡಿದಿಟ್ಟರು.

ಆಧುನಿಕ ಕಾಲಘಟ್ಟದಲ್ಲಿ ಮಹಿಳಾಪರ ಚಿಂತನೆಗಳು ವಿಭಿನ್ನ ಹಾದಿಯಲ್ಲಿ ಆರಂಭಗೊಂಡವು. ಸ್ವಾತಂತ್ರ್ಯ-ಸಮಾನತೆ-ಸಹಬಂಧುತ್ವಗಳು ಪುರುಷನಂತೆ ತನಗೂ ಬೇಕು ಎಂಬ ತುಡಿತ ತೀವ್ರವಾಯಿತು. ಸಮಾಜದಲ್ಲಿನ ಅಸಮಾನತೆ, ವರ್ಗತಾರತಮ್ಯ, ಲಿಂಗವೈಷಮ್ಯತೆಗಳನ್ನು ಕಂಡು ಪ್ರಶ್ನಿಸುವಂತಾದಳು. ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾಗಿದ್ದ ಮಹಿಳೆಯರಲ್ಲಿ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬ ತಿಳುವಳಿಕೆ ಜಾಗೃತವಾಯಿತು; ಮತ್ತು ಅದಕ್ಕಾಗಿ ಹಪಹಪಿಸಿದರು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಶಿಕ್ಷಣ ಪಡೆದ, ಸಾಹಿತ್ಯಾಸಕ್ತ ಒಂದಷ್ಟು ಮಹಿಳೆಯರು, ಪತ್ರಿಕೆಗಳು ಹಾಗೂ ಸಂಘ ಸಂಸ್ಥೆಗಳು ನಡೆಸುವ ಸಾಹಿತ್ಯ ಸ್ಪರ್ಧೆಗಳಿಗಾಗಿ ಬರೆಯತೊಡಗಿದರು. ಅವರಲ್ಲಿ ಶಾಂತಾಬಾಯಿ ನೀಲಗಾರ, ತಿರುಮಲಾಂಬ, ಸರಸ್ವತಿ ಮೊದಲಾದವರು ಪ್ರಮುಖರು. ಶಾಂತಾಬಾಯಿ ನೀಲಗಾರ ಅವರ ಸದ್ಗುಣಿ ಕೃಷ್ಣಾಬಾಯಿ (1908) ಎಂಬ ಕೃತಿ ವಾಗ್ಭೂಷಣ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದು ಆಧುನಿಕ ಮಹಿಳೆಯೊಬ್ಬಳು ಬರೆದ ಮೊದಲ ಕಾದಂಬರಿ ಎಂಬ ಕೀರ್ತಿಗೂ ಪಾತ್ರವಾಯಿತು.

ಶಾಂತಾಬಾಯಿಯವರ ಈ ಕಾದಂಬರಿ ದೊರಕುವವರೆಗೆ ನಂಜನಗೂಡು ತಿರುಮಲಾಂಬ ಅವರೇ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೊದಲ ಕಾದಂಬರಿಗಾರ್ತಿ (ಸುಶೀಲೆ-1913) ಎಂದು ಪರಿಗಣಿಸಲಾಗಿತ್ತು. ಇಪ್ಪತ್ತನೆಯ ಶತಮಾನದಲ್ಲಿ ಸ್ತ್ರೀ ಪರ ಚಿಂತನೆಗಳು ಮತ್ತಷ್ಟು ತೀವ್ರಗೊಂಡು ಮಹಿಳಾ ಚಳುವಳಿ-ಸ್ತ್ರೀವಾದಿ ಚಳುವಳಿ ಎಂಬ ಹೆಸರಿನಲ್ಲಿ ಪ್ರಜ್ಞಾವಂತರು ಹಾಗೂ ವಿದ್ಯಾವಂತ ಹೆಣ್ಣುಮಕ್ಕಳು ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಸಿಡಿದು ನಿಂತರು. ತಮ್ಮ ಹಕ್ಕು-ಸಮಾನತೆಗಾಗಿ ಬರೆವಣಿಗೆಯ ಮೂಲಕ ಪ್ರತಿಭಟಿಸಿದರು. ಅವರಲ್ಲಿ ಪ್ರಮುಖರೆಂದರೆ- ಶ್ಯಾಮಲಾದೇವಿ (ಮಿಸೆಸ್) ಕೊಡಗಿನ ಗೌರಮ್ಮ (ಕಂಬನಿ ಮತ್ತು ಚಿಗುರು) ಬೆಳಗೆರೆ ಜಾನಕಮ್ಮ (ಕಲ್ಯಾಣ) ರಾಜೇಶ್ವರಿ ನರಸಿಂಹಮೂರ್ತಿ (ಶಪ್ತವಾಪಿ) ಜಯಲಕ್ಷ್ಮಿದೇವಿ (ಮುಳ್ಳುಗುಲಾಬಿ), ತ್ರಿವೇಣಿ ಅಂಕಿತದಲ್ಲಿ ಕೃತಿ ರಚಿಸಿದ ಅನಸೂಯ (ಬೆಳ್ಳಿಮೋಡ, ಶರಪಂಜರ, ಹಣ್ಣೆಲೆ ಚಿಗುರಿದಾಗ) ಎಂ.ಕೆ. ಇಂದಿರಾ (ಫಣಿಯಮ್ಮ, ಗೆಜ್ಜೆಪೂಜೆ), ಗೀತಾ ನಾಗಭೂಷಣ (ಹಸಿಮಾಂಸ ಮತ್ತು ಹದ್ದುಗಳು), ಬಿ.ಟಿ. ಲಲಿತಾನಾಯಕ (ಹಬ್ಬ ಮತ್ತು ಬಲಿ), ಕೆ.ಷರೀಫ (ಬೂರ್ಖಾ ಪ್ಯಾರಡೈಜ್, ಪಾಂಚಾಲಿ, ಮುಮ್ತಾಜಳ ಮಹಲು), ಸಾ.ರಾ. ಅಬೂಬಕ್ಕರ್ (ವಜ್ರಗಳು), ವೈದೇಹಿ (ಅಸ್ಪೃಸ್ಯರು) ಶಾಂತಾದೇವಿ ಕಣವಿ (ಬಯಲು ಆಲಯ, ಜಾತ್ರೆ ಮುಗಿದಿತ್ತು), ವೀಣಾ ಶಾಂತೇಶ್ವರ (ಗಂಡಸರು), ಪ್ರತಿಭಾ ನಂದಕುಮಾರ್ (ನಾವು ಹುಡುಗಿಯರೇ ಹೀಗೆ, ಅಕ್ರಮ, ಯಾನಾ), ವಿಜಯಾ ದಬ್ಬೆ (ತಿರುಗಿ ನಿಂತ ಪ್ರಶ್ನೆ, ನಾರಿ ದಾರಿ ದಿಗಂತ), ಹೇಮಾ ಪಟ್ಟಣಶೆಟ್ಟಿ (ಕಣ್ಣುಗಳಲಿ ಕನಸು ತುಂಬಿ, ಹೆಣ್ಣು ), ಸವಿತಾ ನಾಗಭೂಷಣ (ಹೊಳೆ ಮಗಳು, ನಾ ಬರುತ್ತೇನೆ ಕೇಳು, ಸ್ತ್ರೀಲೋಕ), ಎಂ.ಆರ್. ಕಮಲ (ಶಕುಂತಳೋಪಾಖ್ಯಾನ, ಮಾರಿಬಿಡಿ) ಸುಕನ್ಯಾ ಮಾರುತಿ (ತಾಜಮಹಲಿನ ಹಾಡು, ಬಿಂಬದೊಳಗಣ ಮಾತು), ಮಲ್ಲಿಕಾಘಂಟಿ

(ತುಳಿಯದಿರಿ ನನ್ನ, ಈ ಹೆಣ್ಣುಗಳೇ ಹೀಗೆ), ದು.ಸರಸ್ವತಿ (ಈಗೇನ್ ಮಾಡೀರಿ, ಹೆಣೆದರೆ ಜೇಡನಂತೆ), ಎಚ್.ಎಸ್. ಪಾರ್ವತಿ (ಹೆಣ್ಣು ಹೃದಯ, ನೆನಪು ಸಾಯಲಿಲ್ಲ) ಎಚ್.ಎಸ್. ಶ್ರೀಮತಿ (ಹೆಣ್ಣೆ ಹೆಂಗಸು), ನೇಮಿಚಂದ್ರ, (ನಮ್ಮ ಕನಸುಗಳಲ್ಲಿ ನೀವಿದ್ದೀರಿ), ಭಾಗೀರತಿ ಹೆಗಡೆ (ಹೊಳೆಯ ಹಾದಿ, ಬೇಟೆ, ಗುಬ್ಬಿಯ ಸ್ವಗತ), ಎಚ್.ಎಲ್. ಪುಷ್ಪ (ಅಮೃತಮತಿ ಸ್ವಗತ, ಗಾಜುಗೊಳ, ಮದರಂಗಿ) ಹೀಗೆ ಇಂದು ಮಹಿಳಾ ಸಾಹಿತಿಗಳ ಬೃಹತ್ ಪಟ್ಟಿಯೇ ನಮ್ಮ ಮುಂದಿದೆ. ಇವರೆಲ್ಲರೂ ಮಹಿಳೆಯ ಅಂತರಂಗದ ಭಾವನೆಗಳಿಗೆ ಭಾಷೆಯ ರೂಪು ಕೊಟ್ಟರು. ಕುಟುಂಬ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಭಾವನೆಗಳನ್ನು ಗೌರವದಿಂದ ಕಾಣುವಂತಾಗಬೇಕು, ಅವಳಿಗೂ ಪುರುಷನಷ್ಟೇ ಸರಿಸಮನಾಗಿ ಬದುಕಲು ಮುಕ್ತ ಅವಕಾಶ ಬೇಕೆಂದರು. ಆಧುನಿಕ ಮಹಿಳೆ ತನ್ನ “ಹೆಣ್ಣುತನವನ್ನು ಸ್ವತಃ ಅವರೇ ಶೋಧಿಸಿಕೊಂಡಿದ್ದಾರೆ. ಸ್ವತಃ ವ್ಯಾಖ್ಯಾನಿಸಿಕೊಂಡಿದ್ದಾರೆ. ಹೊರ ಒತ್ತಡಗಳಿಲ್ಲದ ನಿಜವಾದ ಹೆಣ್ಣುತನದ ಹೆಮ್ಮೆಯಲ್ಲಿ ಈ ಹೆಂಗಸರು ಅರಳಿ ನಿಂತಿದ್ದಾರೆ”.[5] ಮನೆಯೊಳಗಡೆ ಅಷ್ಟೇ ಅಲ್ಲ; ಮನೆಯಾಚೆಗೂ ಮಹಿಳೆ ಸಂಚರಿಸಿ ಬೆಳೆಯುತ್ತೇನೆಂಬ ಆತ್ಮವಿಶ್ವಾಸ ಹೊಂದುತ್ತಿದ್ದಾಳೆ. ಸಾಂಪ್ರದಾಯಿಕ ಸಾಮಾಜಿಕ ಅಡೆತಡೆಗಳನ್ನು ದಾಟಿ ಸ್ವಂತಿಕೆಯನ್ನು ತೋರಲು ಸನ್ನದ್ಧಳಾಗುತ್ತಿದ್ದಾಳೆ. ಮಹಿಳೆ ಇಂದು ಸಾಹಿತ್ಯ ಕ್ಷೇತ್ರವಷ್ಟೇ ಅಲ್ಲ, ಸಮಾಜದ ಎಲ್ಲ ವಲಯಗಳಲ್ಲೂ ತನ್ನ ಪ್ರತಿಭಾ ಶಕ್ತಿಯ ಮೂಲಕ ಅಸಮಾನತೆ, ಶೋಷಣೆ, ದೌರ್ಜನ್ಯ ತಡೆಗಟ್ಟುವ ಜೊತೆಗೆ ವೈಯಕ್ತಿಕ ಸಾಮರ್ಥ್ಯ, ಕೌಶಲ್ಯ, ನಂಬಿಕೆ, ಜಾಗೃತಿ, ಬುದ್ಧಿವಂತಿಕೆ, ಸಂಪರ್ಕ ಮತ್ತು ವಹಿವಾಟು ಇತ್ಯಾದಿಗಳಲ್ಲಿ ಸೂಕ್ತ ಪ್ರತಿಭೆಯನ್ನು ತೋರುತ್ತಿದ್ದಾಳೆ. ಬಹುಕಾಲಗಳಿಂದ ಮಹಿಳೆ ಬಾಲ್ಯದಲ್ಲಿ ತಂದೆ, ಯೌವ್ವನಾವಸ್ಥೆಯಲ್ಲಿ ಪತಿ, ವೃದ್ಧಾಪ್ಯದಲ್ಲಿ ಮಗನ ಅಧೀನತೆಯಲ್ಲಿಯೇ ಬದುಕು ಸವೆಸುತ್ತ ಪರಾವಲಂಬಿತನದಿಂದ ಜೀವಿಸುತ್ತಿದ್ದವಳು, ಇಂದು ಕೆಲವು ಹಂತದಲ್ಲಿಯಾದರೂ ವಿಜಯಿಯಾಗಿ ಸಮಾಜದ ಎಲ್ಲ ವಲಯಗಳಲ್ಲಿಯೂ ಸ್ಪರ್ಧೆ ಒಡ್ಡುವಂತಾಗಿದ್ದಾಳೆ. ತಾನು ಪುರುಷನಂತೆ ದೈಹಿಕ ಸಾಮರ್ಥ್ಯದಲ್ಲಿಯೂ ಹಿಂದೆ ಬಿದ್ದಿಲ್ಲವೆಂಬುದನ್ನು ಸಾಬೀತು ಪಡಿಸುತ್ತಿದ್ದಾಳೆ.

ಆದಾಗ್ಯೂ ಸರಕಾರ ಮಹಿಳೆಯರ ಪರವಾಗಿ ಹಲವಾರು ಕಾನೂನುಗಳನ್ನು ಜಾರಿಗೊಳಿಸಿ ಅನೇಕ ಸೌಲಭ್ಯತೆಗಳನ್ನು ನೀಡಿದ್ದರೂ ಅದೇಕೋ ಇನ್ನೂ ಅವಳು ಒಂದಷ್ಟು ಶೋಷಣೆಯಿಂದ ಮುಕ್ತವಾಗಲು ಸಾಧ್ಯವಾಗುತ್ತಿಲ್ಲವೇಕೆ? ಎಂಬ ಪ್ರಶ್ನೆ ಕಾಡುತ್ತಲೇ ಇದೆ. ಹೆಣ್ಣಿನ ವಿರುದ್ಧ ನಡೆಯುತ್ತಿರುವ ಭ್ರೂಣಹತ್ಯೆ, ಕಿರುಕುಳ, ಅಸಮಾನತೆ, ಅವಮಾನ, ಅಗೌರವ, ಅತ್ಯಾಚಾರ, ದಬ್ಬಾಳಿಕೆಗಳು ನಮ್ಮ ಹಿರಿಯರು ಅನುಭವಿಸಿದಷ್ಟು ಇಂದು ಇಲ್ಲವಾದರೂ ಸಮಾಜದಿಂದ ಅವು ಇನ್ನೂ ಮಾಸಿ ಹೋಗಿಲ್ಲವೆಂಬುದೇ ವಿಷಾದನೀಯ. ಬಾಲ್ಯಾವಸ್ಥೆಯಿಂದಲೇ ಮಹಿಳೆಗೆ ಶಿಕ್ಷಣದ ಜೊತೆಗೆ ಅವಳ ಹಕ್ಕು , ಸ್ವಾತಂತ್ರ್ಯ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳಲು ಬೇಕಾದ ಮಾರ್ಗದರ್ಶನ ನೀಡುವುದರ ಮೂಲಕ ಜಾಗೃತಿ ಮೂಡಿಸುವ ಜವಾಬ್ದಾರಿ ಅನಿವಾರ್ಯವಾಗಿದೆ. ಕೌಟುಂಬಿಕ ವಲಯದಿಂದ ಮೊದಲ್ಗೊಂಡು ಸಮಾಜದ ಎಲ್ಲ ಕ್ಷೇತ್ರಗಳ ಸಾಧನೆಯ ಹಾದಿಯಲ್ಲಿ ಮುನ್ನುಗ್ಗುತ್ತಿರುವ ಮಹಿಳಾ ಸಮಾಜಕ್ಕೆ, ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತಷ್ಟು ಬೆಂಬಲ ಸಿಗಬೇಕಿದೆ. ಮಹಿಳೆಯೂ ಕೂಡ ಅದರ ಜವಾಬ್ದಾರಿ ಅರಿತು ನಡೆಯಬೇಕಿದೆ.

## ಅಡಿ ಟಿಪ್ಪಣಿಗಳು:

1. ವಿದ್ವಾನ್ ಎನ್. ರಂಗನಾಥ ಶರ್ಮ. (2011). ಹದಿಬದೆಯ ಧರ್ಮ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 68
2. ವಿದ್ವಾನ್ ಎನ್. ರಂಗನಾಥ ಶರ್ಮ. (2011). ಹದಿಬದೆಯ ಧರ್ಮ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 68
3. ವೆಂಕಟಸುಬ್ಬಯ್ಯ. (2019). ಸರ್ವಜ್ಞನ ವಚನಗಳು. ವಿಜಯವಾಹಿನಿ ಪಬ್ಲಿಕೇಷನ್ಸ್. ಶಿವಮೊಗ್ಗ. ಪು.ಸಂ. 109
4. ವೆಂಕಟಸುಬ್ಬಯ್ಯ. (2019). ಸರ್ವಜ್ಞನ ವಚನಗಳು. ವಿಜಯವಾಹಿನಿ ಪಬ್ಲಿಕೇಷನ್ಸ್. ಶಿವಮೊಗ್ಗ. ಪು.ಸಂ. 107
5. ಶ್ರೀಮತಿ ಎಚ್. ಎಸ್. (2010). ಹೆಣ್ಣುತನ ಎಂಬ ಕಣ್ಕಟ್ಟು. ಪ್ರಗತಿ ಗ್ರಾಫಿಕ್ಸ್. ಬೆಂಗಳೂರು. ಪು.ಸಂ. 35

## ಆಕರ ಗ್ರಂಥಗಳು :


1. ಶ್ರೀಮತಿ ಎಚ್. ಎಸ್. (2006). ಆಧುನಿಕ ಮಹಿಳಾ ಸಾಹಿತ್ಯ ಚರಿತ್ರೆ. ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ. (2014). ಸ್ತ್ರೀವಾದಿ ಸಾಹಿತ್ಯ ವಿಮರ್ಶೆ. ಅನುಭವ ಪ್ರಕಾಶನ. ಬೆಂಗಳೂರು.
3. ಪುಷ್ಪ ಎಚ್. ಎಲ್. (2015). ಸ್ತ್ರೀ ಎಂದರೆ ಅಷ್ಟೇ ಸಾಕೆ. ಯಾಜಿ ಪ್ರಕಾಶನ. ಹೊಸಪೇಟೆ.
4. ಶೇಷಗಿರಿರಾವ್ ಎಲ್. ಎಸ್. (2010). ಹೊಸಗನ್ನಡ ಸಾಹಿತ್ಯ ಚರಿತ್ರೆ. ಸ್ವಪ್ನ ಬುಕ್ ಹೌಸ್. ಬೆಂಗಳೂರು.
5. ಶ್ರೀಮತಿ ಎಚ್. ಎಸ್. (2010). ಹೆಣ್ಣುತನ ಎಂಬ ಕಣ್ಕಟ್ಟು. ಪ್ರಗತಿ ಗ್ರಾಫಿಕ್ಸ್. ಬೆಂಗಳೂರು.
6. ಯೋಗರಾಜು ಎಸ್. ಡಿ. (2013). ಮಹಿಳಾ ಸಬಲೀಕರಣ. ಶ್ರೀ ಅನ್ನಪೂರ್ಣ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್. ನೆಲಮಂಗಲ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.